ಎಷ್ಟು ಸಮಯ ಆಗಿದೆ ? ಕಟ್ಟಡ ಪ್ರಾರಂಭಿಸಲು ಇಷ್ಟು ವಿಳಂಬ ಆಗಲಿಕ್ಕೆ ಕಾರಣ ಏನು ? ಇನ್ನು ಎಷ್ಟು ದಿವಸಗಳಲ್ಲಿ ಈ ಕಟ್ಟಡ ಪ್ರಾರಂಭಿಸುವುದಕ್ಕೆ ತಾವು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಎ.ಬಿ. ಜಕನೂರ್.—ಈಗ ಸಧ್ಯಕ್ಕೆ ಅಲ್ಲಿ ಏಜೆನ್ಸಿ ಫಿಕ್ಸ್ ಮಾಡಲಾಗಿದೆ ಕಟ್ಟಡ ಕಾರ್ಯ ಪ್ರಾರಂಭವಾಗಿದೆ. ಅಲ್ಲಿ ಕಲ್ಲು ತಂದು ಹಾಕಿದ್ದಾರೆ, ಫೌಂಡೇಷನ್ ತೆಗೆಯಲಿಕ್ಕೆ ಪ್ರಾರಂಭ ಮಾಡಿದ್ದಾರೆ ಹಿಂದೆ ಏತಕ್ಕೆ ಡಿಲೇ ಆಯಿತು ಎಂಬ ಬಗ್ಗೆ ವಿವರ ಇಲ್ಲ, ಈಗ ಅಲ್ಲಿ ಕೆಲಸ ಪ್ರಾರಂಭವಾಗಿರುವುದರಿಂದ ಮಾನ್ಯ ಸದಸ್ಯರು ಸಂಕೋಚ ಪಡಬೇಕಾದ್ದು ಏನೂ ಇಲ್ಲ.

ಶ್ರೀ ಪಂಪಾಪತಿ.—ಅಲ್ಲಿ ಕಲ್ಲು ಹಾಕಿರುವುದು ಕಾಂಪೌಂಡ್ ಕಟ್ಟಲಿಕ್ಕೆಅದು ಕಟ್ಟಿ ಮುಗಿದಿದೆ. ಕಟ್ಟಡದ ಫೌಂಡೇಷನ್ ಇನ್ನೂ ಆಗಿಲ್ಲ. ತಾವೇ ಮುಖ್ಯಮಂತ್ರಿಗಳ್ಳಮೂಲಕ ಶಂಕುಸ್ಥಾಪನೆ ಮಾಡಿಸೋಣ ಅಂತ ಹೇಳಿದ್ದೀರಿ, ಆದ್ದರಿಂದ ಜಾಗ್ರತೆ ಆ ಕೆಲಸವನ್ನು ನಿರ್ವೇರಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಬಿ ಜಕನೂರು.—ಏಜೆನ್ಸಿ ಫಿಕ್ಸ್ ಆಗಿದೆ, ಅವರು ಕಲ್ಲು ತಂದು ಹಾಕಿ ಫೌಂಡೇಷನ್ ವರ್ಕ್ ಸ್ಟಾರ್ಟ್ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬರುತ್ತೇವೆಂದು ಹೇಳಿದ್ದರು ಅವರು ಬರದಿದ್ದರೆ ನಾವು ಬಂದು ಶುರು ಮಾಡುತ್ತೇವೆ.

Lift Irrigation Schemes in Chikodi Taluk

1098. SRI P.P. HEGRE (Chikodi).—Will the Minister for Transport and Minor Irrigation be pleased to state.—

(a) the number and places where tanks bandharas and Lift Irrigation Schemes proposed in Chikodi taluk;

(b) (1) the works, the plans and estimates of which have been prepared ;

(2) if so, the estimated cost the plans and estimates of which are still to be prepared;

(3) the works that are proposed to be taken up during the year 1981-82;

SRI M. M. J. SADYOJATHA (Minister for Transport and Minor Irrigation).—

(a) 7 M.I. tanks, 1 Bandhara, and 4 Lift Irrigation Schemes are proposed in Chikkodi Taluk, as per Statement-I is laid on the table.

(b) (1) Plans and Estimates are prepared in respect of 11 works as per Statement No. II is laid on the table.

(2) One viz., M.I. tank at Galatga is not prepared as the work could not be surveyed due to obstruction by land owners.

(3) Nil.

ಶ್ರೀ ಪಿ.ಪಿ. ಹೆಗರೆ.—ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಚಿಕ್ಕೋಡಿ ತಾಲೂಕಿನಲ್ಲಿ ೭ ಸಣ್ಣ ನೀರಾವರಿ ಕೆರೆಗಳು, ೧ ಬಂಧಾರ ಹಾಗೂ ೪ ಏತ ನೀರಾವರಿ ಯೋಜನೆಗಳನ್ನು ಕೈಕೊಳ್ಳಲು ಉದ್ದೇಶಿಸಲಾಗಿದೆ ಎಂದು ಹೇಳಿದ್ದಾರೆ, ಇನ್ನು ನನ್ನ ಎರಡನೆಯ ಪ್ರಶ್ನೆಗೆ ಒಂದು ಕಾವಂಗಾರಿಯನ್ನು ಬಿಟ್ಟೇ ಮಾಡಲು ಭೂಮಾಲೀಕರಿಂದ ಅಡ್ಡಿ ಬಂದಿದ್ದರಿಂದ ಕಲಟ್ಗಾದಲ್ಲಿ ಸಣ್ಣ ನೀರಾವರಿ ಕೆರೆಯ ನಕ್ಷೆ ಹಾಗೂ ಅಂದಾಜನ್ನು ತಯಾರಿಸಲಾಗಿಲ್ಲ ಎಂದು ಹೇಳಿದ್ದಾರೆ. ಇನ್ನು ಮೂರನೆಯ ಪ್ರಶ್ನೆಗೆ ಒಂದೂ

ಇಲ್ಲ ಎಂದು ಹೇಳಿದ್ದಾರೆ. ಈ ಯೋಜನೆಗಳು ಸುಮಾರು ೮-೧೦ ವರ್ಷದಿಂದಲೂ ಇವೆ. ಇವೊಕ್ಕೂ ಬೇರೆ ಬೇರೆ ಕಾರಣಗಳನ್ನು ಕೊಟ್ಟು ಈ ವರ್ಷ ಯಾವುದು ಕಾರ್ಯಕ್ರಮ ಇಲ್ಲವೆಂದು ಹೇಳಿದ್ದಾರೆ. ಉದಾಹರಣೆಗೆ ಹೇಳಬೇಕೆಂದರೆ, ಎಲ್ಲಿ ಯಾವುದೇ ಒಂದು ರೀತಿಯ ತೊಂದರೆ ಇಲ್ಲ, ಅಲ್ಲಿ ಸ್ಕೀಮ್ ಸ್ಯಾಂಕ್ಷನ್ ಮಾಡಿಲ್ಲ, ಎಲ್ಲಿ ಭೂ ಮಾಲೀಕರ ತೊಂದರೆ ಇದೆ ಅಲ್ಲಿ ಸ್ಯಾಂಕ್ಷನ್ ಮಾಡಿದ್ದಾರೆ. ಇದರ ಉದ್ದೇಶ ಏನು ? ಇದಕ್ಕೆ ಕಾರಣ ಏನು ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಕಾರಣಗಳನ್ನು ತಮಗೆ ಒದಗಿಸಿರುವ ಪಟ್ಟಿಯಲ್ಲಿ ಕೊಟ್ಟಿದೆ.

ಶ್ರೀ ಪಿ.ಪಿ. ಹೆಗರೆ.—ತಾವು ಕೊಟ್ಟಿರತಕ್ಕ ಕಾರಣಗಳು ಸರಿಯಲ್ಲ ಎಂದು ಹೇಳುತ್ತಿದ್ದೇನೆ. ಬೆಡಕ್ಯಾಳ, ಬಂಬಲವಾಡ, ನಾಗರಾಳ ಇಲ್ಲಿ ದೊಡ್ಡ ದೊಡ್ಡ ಭೂಮಾಲೀಕರಿದ್ದಾರೆ, ಇವರು ಜಮೀನು ಬಿಡುವುದಿಲ್ಲ, ಅಂಥ ಸ್ಕೀಮ್‌ಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ, ಎಲ್ಲಿ ಜಮೀನು ತೊಂದರೆ ಇಲ್ಲ, ಯಾವುದೇ ತೊಂದರೆ ಇಲ್ಲ. ಅಲ್ಲಿ ಸ್ಯಾಂಕ್ಷನ್ ಮಾಡಿಲ್ಲ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಬಂಬಳವಾಡ ಸದಲಗ, ಇವಕ್ಕೆ ಈ ಸಾರಿ ಬಡ್ಜೆಟ್‌ನಲ್ಲಿ ಪ್ರಾವಿಜನ್ ಮಾಡಿದ್ದೇವೆ.

ಶ್ರೀ ಪಿ.ಪಿ. ಹೆಗರೆ.—ಸದಲಗ, ಘಟಪ್ರಭ ಯೋಜನೆಯಲ್ಲಿ ಬರತಕ್ಕದ್ದು ಎಂದು ಹೇಳುವುದಾದರೆ ಇನ್ನುಳಿದ ಎರಡು ಸ್ಕೀಮ್‌ಗಳನ್ನು ಯಾವ ಆಧಾರದ ಮೇಲೆ ತೆಗೆದುಕೊಂಡಿದ್ದೀರಾ ?

ಏಕೆಂದರೆ. ಸದಲಗದ ವಿಚಾರ ಏನಿದೆ ಇದು ಘಟಪ್ರಭಾ ಯೋಜನೆಯಲ್ಲಿ ಬರುವುದರಿಂದ ಇದನು ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಿದ್ದಾರೆ...

ಅಧ್ಯಕ್ಷರು.—ಇದು ತುಂಬಾ ಅತಿಯಾಯಿತು. ತಮಗೆ ಏನು ಪ್ರಶ್ನೆ ಬೇಕೋ ಅದನ್ನು ಕೇಳಿ ಎಂದರೆ, ನೀವು ಇನ್ನೆನೋ ಹೇಳುವುದಕ್ಕೆ ಹೋಗುತ್ತಿದ್ದೀರಿ.

ಶ್ರೀ ಪಿ. ಪಿ. ಹೆಗರೆ.—ಸ್ವಾಮಿ, ಸದಲಗ ಚಿಮ್ಮನವಾಡಿಯದರಲ್ಲಿ ೩ ಸ್ಕೀಂ ಗಳಿವೆ. ಸದಲಗ ಚಿಮ್ಮನವಾಡಿ ಲಿಫ್ಟ್ ಇರಿಗೇಷನ್ ಸ್ಕೀಂ, ಸದಲಗ ಲಿಫ್ಟ್ ಇರಿಗೇಷನ್ ಸ್ಕೀಂ, ಇನ್ನೊಂದು ಮೈನರ್ ಇರಿಗೇಷನ್ ಸ್ಕೀಂ. ಈ ರೀತಿ ೩ ಸ್ಕೀಂಗಳಿಗೆ. ಒಂದು ಸ್ಕೀಂಗೆ ಹೇಳುತ್ತಾರೆ ಇದು ಘಟಪ್ರಭಾ ಯೋಜನೆಯಲ್ಲಿ ಬರುವುದರಿಂದ ಇದನ್ನು ಕೈಬಿಟ್ಟಿದ್ದೇವೆ ಎಂದು. ಹಾಗಾದರೆ ಇನ್ನುಳಿದ ೨ ಸ್ಕೀಂಗಳನ್ನು ಯಾವ ರೀತಿ ಮಾಡುತ್ತಾರೆ ?

ಶ್ರೀ ಎಂ. ಎಂ.ಜೆ. ಸದ್ಯೋಜಾತಪ್ಪ. ಲಿಫ್ಟ್ ಇರಿಗೇಷನ್‌ನ್ನು ಸ್ಕೀಂನ್ನು ತೆಗೆದುಕೊಳ್ಳುತ್ತಿಲ್ಲ ಪಕ್ಕಾಲೇಷನ್ ಟ್ಯಾಂಕ್‌ನ್ನು ತೆಗೆದುಕೊಳ್ಳುತ್ತಿದ್ದೇವೆ

ಶ್ರೀ ಪಿ. ಪಿ. ಹೆಗರೆ.—ಉಳಿದೆರಡು ಸ್ಕೀಂಗಳನ್ನು ಈ ವರ್ಷ ತೆಗೆದುಕೊಳ್ಳುತ್ತೀರಾ ಈ ಲಿಫ್ಟ್ ಇರಿಗೇಷನ್ ಸ್ಕೀಂನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಿದ್ದೀರಿ ಬಂಬಲವಾಡ ಟ್ಯಾಂಕ್‌ಗೆ ಸಂಬಂಧ ಪಟ್ಟಂತೆ ಈಗಾಗಲೇ ಹಲವಾರು ವರ್ಷಗಳಿಂದ ಪೆಂಡಿಂಗ್ ಇದೆ. ಅಲ್ಲವೆ ಇದು ಆಕ್ವಿಸಿಷನ್ ಆಗಿದ್ದು, ಪೋಸಿಷನ್ ಕೂಡ ತೆಗೆದುಕೊಂಡಿದ್ದಾರೆ. ಆದ್ದರಿಂದ ದಯವಿಟ್ಟು ಈ ವರ್ಷವಾದರೂ ಇದನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ.ಎಂಜೆ. ಸದ್ಯೋಜಾತಪ್ಪ.—ಇದನ್ನು ೧೯೮೨-೮೩ನೇ ಸಾಲಿನಲ್ಲಿ ತೆಗೆದುಕೊಳ್ಳುತ್ತೇವೆಂದು ಈಗಾಗಲೇ ನಾನು ಹೇಳಿದ್ದೇನೆ. ಆಗ ತಮಗೆ ಅದು ಕೇಳಿಸಲಿಲ್ಲವೆಂದು ಕಾಣುತ್ತದೆ.

Ramakrishna Service Society at Puttur Taluk

951 SRI RAM BHAT (Puttur).—Will the Minister for Socia Welfare and Backward Classes be pleased to state.—

(a) the amount collected from the Sharadamani orphanage under the auspices of Ramakrishna Service Society of Puttur Taluk, Dakshina Kannada District, towards World FoodProgramme Development Fund during the years 1978, 1979 1980 and 1981 ;